# ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ

## ಫೌಜುದಾರಿ ಪ್ರಕರಣ ಸಂಖ್ಯೆ 67/2022

| | |
|---|---|
| ಫಿರ್ಯಾದಿಃ | ಸರಕಾರದ ಪರವಾಗಿ<br>ಪೋಲಿಸ್ ನಿರೀಕ್ಷಕರು,<br>ಹೊನ್ನಾವರ ಪೋಲಿಸ್ ಠಾಣೆ,ಹೊನ್ನಾವರ. |
| | -ವಿರುದ್ಧ- |
| ಆರೋಪಿಃ | ಲೂಯಿಸ್ ತಂದೆ ಅಲ್ ಪ್ರೆಡ್ ಗೋನ್ಸಾಲ್ವೀಸ್,<br>ವಯಸ್ಸುಃ 55 ವರ್ಷಗಳು,<br>ಉದ್ಯೋಗಃ ಚಾಲಕ,<br>ಸಾಕೀನಃ ಹೂವಿನಹಿತ್ಲು, ಚಂದಾವರ, ಹೊದಿಕೆಶಿರೂರು,<br>ತಾಲೂಕುಃ ಹೊನ್ನಾವರ. |

## ಆರೋಪಣೆ

ಶ್ರೀ ಕುಮಾರ ಜಿ, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ನಿಮ್ಮ ಮೇಲೆ ಈ ಕೆಳಕಂಡ ಆರೋಪಣೆಗಳನ್ನ ಹೊರೆಸುತ್ತಿದ್ದೇನೆ.

1.ಮೊದಲೇಯದಾಗಿ ದಿನಾಂಕಃ 02-01-2022 ರಂದು ರಾತ್ರಿ 08-00 ರ ಸಮಯದಲ್ಲಿ ಆರೋಪಿಯಾದ ನೀನು ಹೊನ್ನಾವರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಇರುವ ಇಡಗುಂಜಿ-ನಗರಬಸ್ತಿಕೇರಿ ರಸ್ತೆಯ ಮೇಲೆ ಮಹೀಂದ್ರಾ ಟೂರಿಸ್ಟ ಟೆಂಪೋ ಸಂಖ್ಯೆಃಕೆಎ-47/ಎ-1558 ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಹೋಗಿ ಕುಚ್ಚೋಡಿ ಕ್ರಾಸ್ ಹತ್ತಿರ ರಸ್ತೆಯ ಏರಿನಲ್ಲಿ ನೀನು ವಾಹನದ ಮೇಲಿನ ನಿಯಂತ್ರಣವನ್ನು ಕಳೆದುಕೊಂಡು, ಟೆಂಪೋ ಹಿಮ್ಮುಖವಾಗಿ ಚಲಿಸುವಂತೆ ಮಾಡಿದ್ದರಿಂದ ಅದು ರಸ್ತೆಯ ಎಡ ಬದಿಯಲ್ಲಿದ್ದ ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿ ಪಲ್ಟಿಯಾಗಿ ಅಪಘಾತವಾದ್ದರಿಂದ, ನೀನು ಭಾರತೀಯ ದಂಡ ಸಂಹಿತೆ ಕಲಂ 279 ರ ಪ್ರಕಾರ ಅಪರಾಧ ಎಸಗಿರುತ್ತಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

2.ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಮೇಲೆ ಹೇಳಿದ ರೀತಿಯಲ್ಲಿ ಅಪಘಾತವನ್ನು ಉಂಟುಮಾಡಿದ್ದರಿಂದ, ಟೆಂಪೋದಲ್ಲಿ ಪ್ರಯಾಣಿಸುತ್ತಿದ್ದ ಚಾಸಾ-7ಶ್ರೀಮತಿ ಅನಸ್ಟಲ್ ಕೋಂ ಫ್ರಾನ್ಸಿಸ್ ಮಿರಾಂಡಾ, ಚಾಸಾ-8 ಪ್ರೀತಮ್ ತಂದೆ ಪಾನ್ಸಿಸ್ ಮಿರಾಂಡಾ, ಚಾಸಾ-9 ಬಸ್ತಾಂವ್ ತಂದೆ ರೈಮಂಡ್ ಮಿರಾಂಡಾ, ಚಾಸಾ-10 ಶ್ರೀಮತಿ ಪಿಯಾದಾದ ಕೋಂ ಬಸ್ತಾಂವ್ ಲೋಪಿಸ್, ಚಾಸಾ-11 ಶ್ರೀಮತಿ ರೆಕಲ್ ತಂದೆ ರೈಮಂಡ ಮಿರಾಂಡಾ, ಚಾಸಾ-12 ಶ್ರೀಮತಿ ಕ್ಲೇರಾ ಕೋಂ ಬಸ್ತಾಂವ್ ಮಿರಾಂಡಾ, ಚಾಸಾ-13 ಶ್ರೀಮತಿ ರೇಖಾ ಕೋಂ ಮಾರಿಯೋ ಮಿರಾಂಡಾ, ಚಾಸಾ-14 ಕುಮಾರಿ ಲೆನ್ಸಿಟಾ ತಂದೆ ಲಾಜೆರ್ ಮಿರಾಂಡಾ, ಚಾಸಾ-15 ಶ್ರೀಮತಿ

ಪಿಲೋಮಿನಾ ಕೋಂ ಸಿಂಪ್ರನ್ ಮಿರಾಂಡಾರವರಿಗೆ ತಲೆ, ಮುಖ, ಸೊಂಟ, ಕೈ, ಕಾಲುಗಳು ಹಾಗೂ ಮೈಗೆ ಸಾದಾ ಸ್ವರೂಪದ ಗಾಯಗಳಾಗಿದ್ದರಿಂದ, ನೀನು ಭಾರತೀಯ ದಂಡ ಸಂಹಿತೆ ಕಲಂ 337 ರ ಪ್ರಕಾರ ಅಪರಾಧ ಎಸಗಿರುತ್ತಿ ಎನ್ನುವ ಆಪಾದನೆಯನ್ನ ಹೊರಿಸುತ್ತಿದ್ದೇನೆ.

3.ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಮೇಲೆ ಹೇಳಿದ ರೀತಿ ಅಪಘಾತವನ್ನ ಉಂಟುಮಾಡಿದ್ದರಿಂದ, ಟೆಂಪೋದಲ್ಲಿ ಪ್ರಯಾಣಿಸುತ್ತಿದ್ದ ಮೃತ ಪ್ರೀನ್ಸಿಟಾ ಮಿರಾಂಡಾರವರು ಟೆಂಪೋದ ಅಡಿಯಲ್ಲಿ ಸಿಲುಕಿ ತಲೆ ಮತ್ತು ಬೆನ್ನಿಗೆ ಮಾರಣಾಂತಿಕ ಗಾಯಗಳಾಗಿ ಆಕೆಯು ಸ್ಥಳದಲ್ಲಿಯೇ ಮರಣ ಹೊಂದಿದ್ದು, ಆಕೆಯ ಮರಣವು ನಿನ್ನ ನಿರ್ಲಕ್ಷತನದಿಂದ ಉಂಟಾದ ಮಾನವ ಹತ್ಯೆಯಲ್ಲದ ಮರಣವಾದ್ದರಿಂದ, ನೀನು ಭಾರತೀಯ ದಂಡ ಸಂಹಿತೆ ಕಲಂ 304(ಎ)ರ ಪ್ರಕಾರ ಅಪರಾಧ ಎಸಗಿರುತ್ತಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

4.ನಾಲ್ಕನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ವಾಹನ ಚಾಲನಾ ಪರವಾನಿಗೆ ಹೊಂದದೇ ಟೆಂಪೋವನ್ನು ಚಾಲನೆ ಮಾಡಿದ್ದರಿಂದ ನೀನು ಮೋಟಾರ್ ವಾಹನ ಕಾಯ್ದೆ ಕಲಂ 181 ರ ಪ್ರಕಾರ ಅಪರಾಧ ಎಸಗಿರುತ್ತಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

5.ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ನಿನ್ನ ಮಾಲಿಕತ್ವದ ಸದರಿ ಟೆಂಪೋಗೆ ವಿಮೆ ಮಾಡಿಸದೆ ರಸ್ತೆಯ ಮೇಲೆ ಚಾಲನೆ ಮಾಡಿದ್ದರಿಂದ, ನೀನು ಮೋಟಾರ್ ವಾಹನ ಕಾಯ್ದೆ ಕಲಂ 196 ರ ಪ್ರಕಾರ ಅಪರಾಧ ಎಸಗಿರುತ್ತಿ ಎನ್ನುವ ಆಪಾದನೆಯನ್ನ ಹೊರಿಸುತ್ತಿದ್ದೇನೆ.

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ಆರೋಪಣೆಗಳನ್ನ ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆ2. ನೀವು ಸದ್ರಿ ಆರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(**ಆರೋಪಣೆಯನ್ನ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಆತ ನೀಡಿದ ಉತ್ತರವನ್ನ ಯಾಥವತ್ತಾಗಿ ದಾಖಲಿಸಿಕೊಳ್ಳಲಾಯಿತು.**)

ದಿನಾಂಕಃ 18-08-2023

ಸ್ಥಳಃ ಹೊನ್ನಾವರ

**(ಶ್ರೀ ಕುಮಾರ ಜಿ.,)**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**